KATK010056102023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ ಸಂ.125/2023**

ಪ್ರಾ.ಸಾ. ಃ **24**

ದೋ.ಸಾ. ಃ **29**

ದಿ.**25.11.2025**

| | |
|---|---|
| ಹೆಸರು | ಃ ಪ್ರದೀಪ್ ಎಸ್.ಎಸ್. |
| ತಂದೆಯ ಹೆಸರು | ಃ ಲೇಟ್ ಶ್ರೀರಂಗಪ್ಪ |
| ವಯಸ್ಸು | ಃ **38** ವರ್ಷ |
| ಉದ್ಯೋಗ | ಃ ಸೆಕ್ಷನ್ ಆಫೀಸರ್, ಬೆಸ್ಕಾಂ, ಜಯನಗರ, ತುಮಕೂರು |
| ವಾಸಸ್ಥಳ | ಃ ಬಟವಾಡಿ, ತುಮಕೂರು |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ದಿ.22.12.2021 ರಿಂದ 04.07.2025 ರವರೆಗೆ ನಾನು ಹೆಬ್ಬೂರಿನ ಬೆಸ್ಕಾಂ ನಲ್ಲಿ ಶಾಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ.27.03.2023 ರಂದು ಕ್ಯಾತ್ಸಂದ್ರ ಸರ್ಕಲ್ ಪೋಲೀಸ್ ವೃತ್ತ ನಿರೀಕ್ಷಕರು ಒಂದು ಪತ್ರವನ್ನು ಬರೆದು, ತುಮಕೂರು ತಾಲ್ಲೂಕು, ಹೆಬ್ಬೂರು ಹೋಬಳಿ ಬನ್ನಿಮರದ ಕಟ್ಟೆಯಲ್ಲಿರುವ ನಾಗರಾಜು ಎಂಬುವವರ ಬಾಬ್ತು ತಾಂಡವೇಶ್ವರ ವುಡ್ ವರ್ಕ್ ಮುಂಭಾಗ ದಿ.19.03.2023 ರಂದು ರಾತ್ರಿ 9.00-ರಾತ್ರಿ 12.00 ಗಂಟೆಯವರೆಗೆ ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ವರದಿ ನೀಡಲು ಕೋರಿರುತ್ತಾರೆ. ಆ ಪತ್ರ ನಮ್ಮ ಕಚೇರಿಯಲ್ಲಿ ಸ್ವೀಕೃತವಾಗಿದ್ದು, ಈ ಬಗ್ಗೆ ದಿ.12.04.2023 ರಂದು ವರದಿಯನ್ನು ನೀಡಿ, ದಿ.19.03.2023 ರಂದು ರಾತ್ರಿ 9.00-ರಾತ್ರಿ 12.00 ಗಂಟೆಯವರೆಗೆ ಬನ್ನಿಮರದ ಕಟ್ಟೆ ಜಾಗದಲ್ಲಿ ಭಕ್ತರಹಳ್ಳಿ 66/11 ಕೆ.ವಿ. ಉಪ ಕೇಂದ್ರದಿಂದ f-05 ಹಾಲಗೋನಹಳ್ಳಿ

ಎನ್.ಜೆ.ವೈ.ಪೂರಕದಿಂದ ವಿದ್ಯುತ್ ಪೂರೈಕೆಯಾಗುತ್ತಿದ್ದ ಬಗ್ಗೆ ಹೇಳಿರುತ್ತೇನೆ. ವೃತ್ತ ನಿರೀಕ್ಷಕರು ಕೊಟ್ಟ ಪತ್ರವನ್ನು ನೋಡುತ್ತಿದ್ದು, ಅದನ್ನು ನಿಶಾನೆ ಪಿ51 ಎಂದು, ನನ್ನ ವರದಿಯನ್ನು ನಿಶಾನೆ ಪಿ52 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ52(ಎ) ಎಂದು ಮತ್ತು ಅದಕ್ಕೆ ಸಂಬಂಧಪಟ್ಟಂತೆ 4 ಹಾಳೆಗಳುಳ್ಳ ದಾಖಲೆಯನ್ನು ನಿಶಾನೆ ಪಿ53 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:**

**3.** ಗ್ರಾಮ ಪ್ರದೇಶದಲ್ಲಿ ಶಿಫ್ಟ್ ಪ್ರಕಾರ ವಿದ್ಯುತ್ ಪೂರೈಕೆ ಆಗುತ್ತದೆ ಎಂದರೆ ಈ ಪ್ರಕರಣದಲ್ಲಿ ನಿರಂತರ ವಿದ್ಯುತ್ ಪೂರೈಕೆ ಆಗುತ್ತಿತ್ತು. ನಮಗೆ ಸಂಬಂಧಿಸಿದಂತೆ 10-15 ಹಳ್ಳಿಗಳಿಗೆ ವಿದ್ಯುತ್ ಪೂರೈಕೆಯಾಗುತ್ತದೆ. ಕುಣಿಗಲ್ ಶಾಖೆಯಿಂದ ಬೇರೆ ಹಳ್ಳಿಗಳಿಗೆ ವಿದ್ಯುತ್ ಪೂರೈಕೆ ಆಗುತ್ತದೆ. ತಾಂಡವೇಶ್ವರ ವುಡ್ ವರ್ಕ್ ಗೆ ವಿದ್ಯುತ್ ಸಂಪರ್ಕ ತೆಗೆದುಕೊಳ್ಳಬೇಕಾದರೆ ನಮ್ಮ ಶಾಖೆಗೆ ಅರ್ಜಿ ಹಾಕಿ ವಿದ್ಯುತ್ ಸಂಪರ್ಕ ತೆಗೆದುಕೊಳ್ಳಬೇಕು. ತಾಂಡವೇಶ್ವರ ವುಡ್ ವರ್ಕ್ ನವರು ಸಲ್ಲಿಸಿದ ಅರ್ಜಿಯನ್ನು ನಾನು ತಂದಿಲ್ಲ. ಆ ಸಮಯದಲ್ಲಿ ನಿರಂತರವಾಗಿ ವಿದ್ಯುತ್ ಪೂರೈಕೆ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ವೃತ್ತ ನಿರೀಕ್ಷಕರು ತಮ್ಮ ಪತ್ರದಲ್ಲಿ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಕೊಟ್ಟಿದ್ದರಿಂದ ಅವರಿಗೆ ಅನುಕೂಲವಾಗುವಂತೆ ಸುಳ್ಳು ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು